Reg. No. | | | | | | | | | |

# BSPKAL 154

## Credit Based II Semester B.A.S.L.P. Examination, September 2022
## (2017-18 Batch Onwards)
## ADVANCED KANNADA FOR KANNADA SPEAKERS

Time : 3 Hours | Max. Marks : 80

I. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. **(8×3=24)**

1) ಅಳುತ್ತಾ ಭೀಮನಲ್ಲಿಗೆ ಬಂದ ದ್ರೌಪದಿಯು ಕೊನೆಗೆ ನಗುತ್ತಾ ಹಿಂತಿರುಗುವ ಸನ್ನಿವೇಶವು ರನ್ನನಲ್ಲಿ ಹೇಗೆ ಚಿತ್ರಿತವಾಗಿದೆ ? ವಿವರಿಸಿರಿ.

**ಅಥವಾ**

ಜನಪದ ಕಾವ್ಯಭಾಗದಲ್ಲಿ ಬರುವ ಪುರುಷ ಪಾತ್ರಗಳ ಮೇಲೆ ಕಾಳಮ್ಮ ತನ್ನ ಪ್ರಭುತ್ವವನ್ನು ಹೇಗೆ ಸ್ಥಾಪಿಸುತ್ತಾಳೆ ?

2) ಮಂಗಳೂರು ಬಸ್ಸುಗಳು ಹಾಸ್ಯ ಬರಹದ ಸ್ವಾರಸ್ಯವೇನು ?

**ಅಥವಾ**

ಸ್ಮರಣ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಹರ್ಬರ್ಟ್ ಪೋಲನ್ನರು ಸೂಚಿಸಿದ ಮಾರ್ಗಗಳು ಯಾವುದು ? ವಿಶದಪಡಿಸಿರಿ.

3) ಅಕಾಲಿಕ ಮಳೆ ಹಾಗೂ ಇತರ ಪ್ರತಿಕೂಲ ಪರಿಸ್ಥಿತಿಗಳು ದೇವೇಂದ್ರನು ಊರಿಗೆ ಮರಳಲು ಅಸಾಧ್ಯವಾದ ಸನ್ನಿವೇಶವನ್ನು ತಂದೊಡ್ಡಿದ ಬಗೆಯನ್ನು ವಿವರಿಸಿ.

**ಅಥವಾ**

ಮಣ್ಣಿನೊಂದಿಗೆ ದೇವೇಂದ್ರ ಹಾಗೂ ಅವನ ತಂದೆಯ ಸಂಬಂಧಗಳು ಹೇಗೆ ಅನಾವರಣಗೊಂಡಿವೆ ? ಚರ್ಚಿಸಿರಿ.

II. ಈ ಪ್ರಶ್ನೆಗಳಿಗೆ ಉತ್ತರಿಸಿರಿ. **(5×3=15)**

1) ಡಾಂಭಿಕ ಭಕ್ತಿಯನ್ನು ಜೇಡರ ದಾಸಿಮಯ್ಯನವರ ವಚನಗಳ ಮೂಲಕ ವಿಶದಪಡಿಸಿರಿ.

**ಅಥವಾ**

ಬಾಹುಬಲಿಯ ವ್ಯಕ್ತಿತ್ವದ ಅನನ್ಯತೆಯನ್ನು 'ದಿಗಂಬರ ಧ್ಯಾನ' ಕವಿತೆ ಹೇಗೆ ಚಿತ್ರಿಸಿದೆ ? ವಿವರಿಸಿರಿ.

2) ಭಾರತೀಯ ಸಂಸ್ಕೃತಿಯು ವಿಶ್ವಕ್ಕೆ ನೀಡಿದ ಕೊಡುಗೆಯನ್ನು ಚರ್ಚಿಸುತ್ತಾ ಕಾರಂತರು ಸಂಸ್ಕೃತಿಯ ಬಗೆಗಿನ ಕಾಳಜಿಯನ್ನು ಹೇಗೆ ವ್ಯಕ್ತಪಡಿಸಿದ್ದಾರೆ ?

**ಅಥವಾ**

ವಿಧವಾ ವಿವಾಹ ಪ್ರಸಂಗವನ್ನು ಗೌರಮ್ಮನವರು ಕ್ರಾಂತಿಯಾಗಿಸಿದ ಬಗೆ ಹೇಗೆ ? ಚರ್ಚಿಸಿರಿ.

3) ಹೈದರಾಬಾದಿನ ಸಹಪಾಠಿಗಳೊಂದಿಗೆ ದೇವೇಂದ್ರನ ಸಂಬಂಧವನ್ನು ಕುರಿತು ಬರೆಯಿರಿ.

**ಅಥವಾ**

'ಮಣ್ಣು' – ಎಂಬೀ ನೀಳ್ಗತೆಯು ಒಡ ಮೂಡಿಸುವ ವಿವಿಧ ಸಾಂಕೇತಿಕತೆಗಳನ್ನು ಕುರಿತು ಚರ್ಚಿಸಿರಿ.

III. **ಒಂದು** ಪದ್ಯ ಭಾಗದ ಸಂದರ್ಭ ಸೂಚಿಸಿ ಭಾವಾರ್ಥವನ್ನು ಬರೆಯಿರಿ. **(1×5=5)**

ಮರನೊಳಗೆ ಮಂದಾಗ್ನಿಯ ಉರಿಯದಂತಿರಿಸಿದೆ
ನೊರೆವಾಲೊಳಗೆ ತುಪ್ಪದ ತೋರದಂತಿರಿಸಿದೆ, ಶರೀರದೊಳಗೆ
ಆತ್ಮನನಾರೂ ಕಾಣದಂತಿರಿಸಿದೆ – ನೀ ಬೆರಸಿಹ ಭೇದಕ್ಕೆ
ಬೆರಗಾದೆನಯ್ಯ ರಾಮನಾಥ

**ಅಥವಾ**

ಮಗುವೆ,
ಹೇಗೆ ಕಲಿಸಲಿ ನಿನಗೆ
ಸತ್ಯವನೆ ನುಡಿ ಎಂದು ?
ಸುಳ್ಳಿನಾಶ್ರಯ ಎಂದು ಸಲ್ಲದೆಂದು ?
ಸತ್ಯದ ಕೊಲೆ ಇಲ್ಲಿ ನಿತ್ಯದ ಸುದ್ದಿ

IV. **ಎರಡು** ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ. **(2×4=8)**

1) 'ಊರುಗಳನುಡಿವೆನೊದೆವೆಂ ಕೌರವ ಪರಿಬೃಢನ ಮಕುಟಮಂ'.
2) 'ಉದರಭರಣಕೆ ಏಸು ಸತ್ತ್ವಹಾನಿ'.
3) 'ನಂದನದ ತುಣುಕೊಂದು ಬಿದ್ದಿದೆ ನೋಟ ಸೇದು ಯಾರಿಗೆ' ?
4) 'ಹೊಸ ಬಟ್ಟೆ ಕಣ್ಣೆದುರು ತೆರೆಯುವಂತೆ'.

V. ಅ) **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ. **(2×4=8)**

1) ಕೋಟ ಶಿವರಾಮ ಕಾರಂತ
2) ಕೊಡಗಿನ ಗೌರಮ್ಮ
3) ಪಾ. ವೆಂ. ಆಚಾರ್ಯ
4) ಭುವನೇಶ್ವರಿ ಹೆಗಡೆ.

ಆ) **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ. **(2×4=8)**

1) ದೇವೇಂದ್ರ
2) ಗಿರಡ್ಡಿ ಗೋವಿಂದರಾಜ
3) ದೇವೇಂದ್ರನ ತಂದೆ
4) ಮಣ್ಣು.

VI. ಕೆಳಗಿನ ಪ್ರಶ್ನೆಗಳಿಗೆ **ಒಂದು** ವಾಕ್ಯದಲ್ಲಿ ಉತ್ತರಿಸಿರಿ. **(1×12=12)**

1) ಭೀಮ ತೀರಿಸಬೇಕಿದ್ದ ಎರಡು ಪ್ರತಿಜ್ಞೆಗಳಾವುವು ?
2) ಜೇಡರ ದಾಸಿಮಯ್ಯನ ವಚನಾಂಕಿತವೇನು ?
3) ದಿಗಂಬರ ವ್ಯಕ್ತಿತ್ವ ಯಾರದು ?
4) ಮಹದೇಶ್ವರ ವಾಸವಾಗಿದ್ದೆಲ್ಲಿ ?
5) ಇಂದು ಯಾವುದಕ್ಕೆ ಮನ್ನಣೆ ದೊರೆಯುತ್ತಿಲ್ಲ ?
6) ಏಕಾಗ್ರತೆಯನ್ನು ಸಾಧಿಸುವುದು ಹೇಗೆ ?
7) ಕಥಾ ನಾಯಕನ ಮಡದಿ ಯಾರು ?
8) ನಾವು ಸಂಸ್ಕೃತರಾಗುವುದು ಯಾವಾಗ ?
9) 'ಮಣ್ಣು' ನೀಳ್ಗತೆಯ ಕರ್ತೃ ಯಾರು ?
10) ತಂದೆ ತೀರಿಕೊಂಡಾಗ ದೇವೇಂದ್ರ ಎಲ್ಲಿ ಇದ್ದ ?
11) ದೇವೇಂದ್ರನ ಪರೀಕ್ಷಾ ಫಲಿತಾಂಶವೇನು ?
12) ಅಸ್ತವ್ಯಸ್ತ ಮನೆತನ ಸುಧಾರಿಸಿದವರಾರು ?

---